<u>ಅಸಲು ದಾವಾಃ</u> - 284/2013 ಡಿ.ಡಬ್ಲ್ಯೂಃ- 3

ದಿನಾಂಕಃ 20.11.2025 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ- 4 ರಿಂದ 13 ನೇ ಪ್ರತಿವಾದಿಗಳ ಪರ ಶ್ರೀ.ಎಸ್‌ಹೆಚ್‌ಇ ವಕೀಲರಿಂದ</u>

ದಾವಾ ಆಸ್ತಿಯ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಎಷ್ಟು ಎಂದರೆ ಸಾಕ್ಷಿಯು ಗುಡ್ಡೇಹಳ್ಳಿ ಗ್ರಾಮದ ಸರ್ವೆ ನಂಬರ್ 112/1 ರಲ್ಲಿ 39 ಗುಂಟೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 52/1 ರಲ್ಲಿ ಪಹಣಿ ಯಾರ ಹೆಸರಿಗೆ ಬರುತ್ತದೆ ಎಂದರೆ ಈಶ್ವರಪ್ಪ ಬಿನ್ ಹನುಮಂತಪ್ಪ ರವರ ಹೆಸರಿಗೆ 23 ಗುಂಟೆ ಪಹಣಿ ಮತ್ತು ಸ್ವಾಧೀನ, ನನ್ನ ಚಿಕ್ಕಪ್ಪ ವೀರಪ್ಪ ಬಿನ್ ರುದ್ರಪ್ಪ ರವರ ಹೆಸರಿಗೆ ಮತ್ತು ಸ್ವಾಧೀನದಲ್ಲಿ 24 ಗುಂಟೆ ಇದೆ, ನನ್ನ ತಾಯಿ ಹನುಮಮ್ಮರವರ ಹೆಸರಿಗೆ 24 ಗುಂಟೆ ಎಂದು ನುಡಿಯುತ್ತಾರೆ ಮುಂದುವರೆದು ಸಾಕ್ಷಿಯು ನನ್ನ ತಾಯಿ ಹನುಮಮ್ಮರವರ ಹೆಸರಿಗೆ ಇರುವ 24 ಗುಂಟೆ ಜಮೀನಿನಲ್ಲಿ ದಿಃ 18.04.1983 ರಲ್ಲಿ ಜುಬಾನೆ ಹಿಸ್ಸೆ ಪ್ರಕಾರ ನನ್ನ ಅಣ್ಣ 3 ನೇ ಪ್ರತತಿವಾದಿ 12 ಗುಂಟೆಯಲ್ಲಿ ಸ್ವಾಧೀನ ಇದ್ದಾರೆ ಅದೇ ರೀತಿ ನನ್ನ ತಮ್ಮ ಲೋಕೇಶ್ವರಪ್ಪ ಬಿನ್ ಶಿವಪ್ಪ ರವರು 12 ಗುಂಟೆಯಲ್ಲಿ ಸ್ವಾಧೀನ ಇದ್ದಾರೆ ಎಂದು ನುಡಿಯುತ್ತಾರೆ. ಜುಬಾನೆ ಹಿಸ್ಸೆಯ ಪ್ರಕಾರ ಸದರಿ ಆಸ್ತಿಗಳು ಬಂದಿದ್ದಾವಾ ಎಂದರೆ ಹೌದು.

ಸರ್ವೆ ನಂ.85/1 ರಲ್ಲಿ ಒಟ್ಟು ವಿಸ್ತೀರ್ಣ 2 ಎಕರೆ 20 ಗುಂಟೆಯಲ್ಲಿ ಯಾರ ಹೆಸರಿಗೆ ಇದೆ ಎಂದರೆ ಸಾಕ್ಷಿಯು ಈಶ್ವರಪ್ಪ ಬಿನ್ ಹನುಮಂತಪ್ಪ ರವರ ಹೆಸರಿಗೆ 34 ಗುಂಟೆ , ವೀರಪ್ಪ ಬಿನ್ ರುದ್ರಪ್ಪ ರವರಿಗೆ 33 ಗಂಟೆ, ನನ್ನ ತಾಯಿ ಹನುಮಮ್ಮ ರವರಿಗೆ 33 ಗುಂಟೆ ಎಂದು ನುಡಿಯುತ್ತಾರೆ ಮುಂದುವರೆದು ಸಾಕ್ಷಿಯು ನನ್ನ ತಾಯಿಯ ಹೆಸರಿಗೆ ಇದ್ದಂತಹ ಜಮೀನು ದಿಃ 18.04.1983 ರಲ್ಲಿ ಜುಬಾನೆ ಹಿಸ್ಸೆ ಪ್ರಕಾರ ಮಲ್ಲಪ್ಪನವರಿಗೆ ಹೋಗಿ ಅವರ ಪೌತಿ ಮೇರೆಗೆ ಪ್ರತಿವಾದಿ 1(ಎ) ಯಿಂದ (ಬಿ) ರವರ ಹೆಸರಿಗೆ ಹೋಗಿರುತ್ತದೆ ಎಂದು ನುಡಿಯುತ್ತಾರೆ. ಈ ಆಸ್ತಿ ಪ್ರತಿವಾದಿ 1(ಎ) ಯಿಂದ (ಬಿ)

ರವರಿಗೆ ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿ ದಿಃ 18.04.1983 ರ ಜುಬಾನೆ ಹಿಸ್ಸೆಯ ಮೂಲಕ ಎಂದು ನುಡಿಯುತ್ತಾರೆ.

ಸರ್ವೆ ನಂ.27/1 ರ ಜಮೀನು ಯಾರ ಹೆಸರಿಗೆ ಇರುತ್ತದೆ ಎಂದರೆ ಸಾಕ್ಷಿಯು 29 ಗುಂಟೆಯ ಖಾತೆಯ ಪಹಣಿ ಲೋಕೇಶ್ವರಪ್ಪ ಬಿನ್ ಶಿವಪ್ಪರವರ ಹೆಸರಿಗೆ ಇದ್ದು ಅವರ ಪೌತಿಯ ನಂತರ ಪ್ರತಿವಾದಿ 4 ರಿಂದ 6 ರವರಿಗೆ ಹೋಗಿರುತ್ತದೆ ಎಂದು ನುಡಿಯುತ್ತಾರೆ.

ಸರ್ವೆ ನಂ.1/1 ರ ಜಮೀನು ಯಾರ ಹೆಸರಿಗೆ ಇದೆ ಎಂದರೆ ಸಾಕ್ಷಿಯು 2 ಎಕರೆ 23 ಗುಂಟೆ ಜಮೀನು ದಿಃ 18.04.1983 ರ ಜುಬಾನೆ ಹಿಸ್ಸೆಯ ಮೂಲಕ ಬಂದಿರುತ್ತದೆ ಎಂದು ನುಡಿಯುತ್ತಾರೆ. ಲೋಕೇಶಪ್ಪರವರಿಗೆ 1 ಎಕರೆ 17 ಗುಂಟೆ, ನನ್ನ ಹೆಸರಿಗೆ 22 ಗುಂಟೆ, ಪ್ರತಿವಾದಿ 1(ಎ) ಯಿಂದ (ಬಿ) ರವರಿಗೆ 24 ಗುಂಟೆ ಬಂದು ಅದೇ ರೀತಿ ಸ್ವಾಧೀನದಲ್ಲಿದ್ದೇವೆ ಎಂದು ನುಡಿಯುತ್ತಾರೆ.

ಸರ್ವೆ ನಂ.12/10 ರ ಜಮೀನು ಯಾರ ಹೆಸರಿಗೆ ಇದೆ ಸಾಕ್ಷಿಯು 1 ಎಕರೆ 2 ಗುಂಟೆಯನ್ನು 3 ನೇ ಪ್ರತಿವಾದಿ ನೋಂದಾಯಿತ ದಾನಪತ್ರದಂತೆ ನನಗೆ ದಾನ ಮಾಡಿರುತ್ತಾರೆ ಅದರಂತೆ ನಾನೇ ಸ್ವಾಧೀನದಲ್ಲಿದ್ದೇನೆ ಎಂದು ನುಡಿಯುತ್ತಾರೆ.

ಸರ್ವೆ ನಂ.17/7 ರ ಜಮೀನು ಯಾರ ಹೆಸರಿಗೆ ಇದೆ ಎಂದರೆ ಸಾಕ್ಷಿ 1 ಎಕರೆ 12 ಗುಂಟೆ ಈಶ್ವರಪ್ಪ ಮತ್ತು 3 ನೇ ಪ್ರತಿವಾದಿಯು ನೋಂದಾಯಿತ ಕ್ರಯಪತ್ರದಂತೆ ನನಗೆ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಸರ್ವೆ ನಂ.17/1 ರ ಜಮೀನು ಯಾರ ಹೆಸರಿಗೆ ಇದೆ ಎಂದರೆ ಸಾಕ್ಷಿಯು 26 ಗುಂಟೆ ಜಮೀನು ಈಶ್ವರಪ್ಪ ಬಿನ್ ಹನುಮಂತಪ್ಪ ಮತ್ತು 3 ನೇ ಪ್ರತಿವಾದಿಯ ಜಂಟಿ ಹೆಸರಿಗೆ ಇರುತ್ತದೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯ ಸರ್ವೆ ನಂ.39 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇರುತ್ತದೆ ಹಾಗೂ ಯಾರ ಹೆಸರಿಗೆ ಹೇಗೆ ಬಂದಿರುತ್ತದೆ ಎಂದರೆ ಎಂ ಆರ್ ನಂ.5/89-90 ರಂತೆ ನಾನು ವೀರಪ್ಪರವರಿಂದ ಖರೀದಿ

13 ಗುಂಟೆಯನ್ನು ಖರೀದಿ ಮಾಡಿರುತ್ತೇನೆ, 13 ಗುಂಟೆ ಈಶ್ವರಪ್ಪ ಬಿನ್ ಹನುಮಂತಪ್ಪರವರಿಗೆ ಅವರ ತಂದೆ ಪೌತಿ ಆಧಾರದ ಮೇಲೆ ಬಂದಿರುತ್ತದೆ ಉಳಿದ 13 ಗುಂಟೆ ನನ್ನ ತಂದೆ ಪೌತಿಯ ಮೇರೆಗೆ ನನ್ನ ತಾಯಿಯ ಹೆಸರಿಗೆ ಬಂದಿದ್ದು ದಿಃ 18.04.1983 ರ ಜುಬಾನೆ ಹಿಸ್ಸೆಯ ಪ್ರಕಾರ ವಾದಿಯ ಹೆಸರಿಗೆ ಹೋಗಿ ಅವರು ಸ್ವಾಧೀನದಲಿರುತ್ತಾರೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯಲ್ಲಿ ಯಾರು ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿ ವಾದಿ ಎಂದು ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ